# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 60 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬಾರ್ |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 13–12–2018 |

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಒಟ್ಟು ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) ಅವುಗಳಲ್ಲಿರುವ ಒಟ್ಟು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು; | ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ 19 ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ವಿಶ್ವವಿದ್ಯಾಲಯಗಳಲ್ಲಿನ ಭೋದಕ ಮತ್ತು ಭೋದಕೇತರ ವೃಂದಗಳಲ್ಲಿ ಮಂಜೂರಾದ, ಭರ್ತಿಮಾಡಿರುವ ಹಾಗು ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ-ಅ ರಲ್ಲಿ ಒದಗಿಸಿದೆ. |
| (ಆ) | ಆ ಪೈಕಿ ಖಾಲಿ ಇರುವ ಹಾಗೂ ಭರ್ತಿಯಾದ ಹುದ್ದೆಗಳೆಷ್ಟು; | |
| (ಇ) | ವಿಶ್ವವಿದ್ಯಾಲಯಗಳಲ್ಲಿ ಸರ್ಕಾರದಿಂದ ಅಂಗೀಕೃತವಾದ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; | |
| (ಈ) | ವಿಶ್ವವಿದ್ಯಾಲಯಗಳಲ್ಲಿನ ಬೋಧಕರ ಸಂಖ್ಯೆ ಎಷ್ಟು; ಅನೇಕ ವಿಶ್ವವಿದ್ಯಾಲಯಗಳಲ್ಲಿ ಬೋಧಕರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಖಾಲಿ ಹುದ್ದೆಗಳನ್ನು ತುಂಬದಿರಲು ಸರ್ಕಾರಕ್ಕೆ ಇರುವ ಸಕಾರಣಗಳೇನು; ಯಾವಾಗ ಭರ್ತಿ ಮಾಡಲಾಗುವುದು; | ವಿಶ್ವವಿದ್ಯಾಲಯಗಳಲ್ಲಿನ ಭೋದಕರ ಸಂಖ್ಯೆ:- '3900<br>ಬಂದಿದೆ.<br>ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ವಿಶ್ವವಿದ್ಯಾಲಯಗಳ ಭೋದಕ ಮತ್ತು ಭೋದಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಾಗ ಅನುಸರಿಸಬೇಕಾದ ಮಾನದಂಡಗಳ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 136 ಯುಎನ್ಇ 2017 ದಿನಾಂಕ:17.07.2017ರಲ್ಲಿ ಸೂಚನೆಗಳನ್ನು ನೀಡಲಾಗಿತ್ತು. ಸದರಿ ಸುತ್ತೋಲೆಯಲ್ಲಿ ಸೂಚಿಸಿದ ಮಾನದಂಡಗಳು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ UGC Regulations (Minimum Qualifications for Appoinment of Teachers and other academic Staff in Universities and colleges and measures for the maintainece of standards in Higer Education) 2010 ರಲ್ಲಿ ಗೊತ್ತುಪಡಿಸಲಾಗಿರುವ ಅವಕಾಶಗಳು,ಅಗತ್ಯತೆಗಳು ಮತ್ತು ಮಾನದಂಡಗಳಿಗೆ ವ್ಯತಿರಿಕ್ತವಾಗಿದ್ದ ಕಾರಣ, ಭೋದಕ ಹುದ್ದೆಗಳ ನೇಮಕಾತಿ ವಿಧಾನದ ಸಮಗ್ರ ಪರಿಶೀಲನೆ ಮತ್ತು ಪುನರಾವಲೋಕನ ಅಗತ್ಯವೆಂದು ಕಂಡುಬಂದ ಹಿನ್ನೆಲೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 136 ಯುಎನ್ಇ 2017 ದಿನಾಂಕ:17.07.2017ನ್ನು ತಕ್ಷಣ ಹಿಂಪಡೆಯಲು ಹಾಗೂ ಸದರಿ ಸುತ್ತೋಲೆಯನ್ನು ಅನುಸರಿಸಿ ವಿಶ್ವವಿದ್ಯಾಲಯಗಳಲ್ಲಿ ಆರಂಭಿಸಲಾಗಿದ್ದ ನೇಮಕಾತಿಗಳನ್ನು ಕೂಡಲೇ ಸ್ಥಗಿತಗೊಳಿಸಲು ಇಡಿ 136 ಯುಎನ್ಇ 2017 ದಿನಾಂಕ:05.11.2018ರ ಸುತ್ತೋಲೆಯಲ್ಲಿ ಸೂಚಿಸಲಾಗಿರುತ್ತದೆ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಮಾರ್ಗಸೂಚಿಗಳನುಸಾರ ವಿಶ್ವವಿದ್ಯಾಲಯಗಳ ಭೋದಕ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ನಿಯಮಗಳನ್ನು ರೂಪಿಸಲು ಸರ್ಕಾರದ ಹಂತದಲ್ಲಿ ಕ್ರಮಕೈಗೊಳ್ಳಲಾಗುತ್ತಿದ್ದು, ತದನಂತರ ವಿಶ್ವವಿದ್ಯಾಲಯಗಳ ಭೋದಕ ಮತ್ತು ಭೋದಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದಿಂದ ನಿಯಮಾನುಸಾರ ಅನುಮತಿ ನೀಡಲಾಗುವುದು. |

| | | |
|---|---|---|
| (೬೬) | ದಾವಣಗೆರೆ ವಿಶ್ವವಿದ್ಯಾಲಯಗಳಲ್ಲಿ ಎಷ್ಟು ಖಾಲಿ ಹುದ್ದೆಗಳಿವೆ; (ಬೋಧಕರ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಯಾವಾಗ ಭರ್ತಿ ಮಾಡಲಾಗುವುದು? | ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ-ಅ ರಲ್ಲಿನ ಕ್ರಮಸಂಖ್ಯೆ: 02 ರಲ್ಲಿ ಒದಗಿಸಿದೆ.<br>ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಮಾರ್ಗಸೂಚಿಗಳನುಸಾರ ವಿಶ್ವವಿದ್ಯಾಲಯಗಳ ಭೋದಕ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ನಿಯಮಗಳನ್ನು ರೂಪಿಸಲು ತದನಂತರ ದಾವಣಗೆರೆ ವಿಶ್ವವಿದ್ಯಾಲಯದಲ್ಲಿನ ಭೋದಕ ಮತ್ತು ಭೋದಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದಿಂದ ನಿಯಮಾನುಸಾರ ಅನುಮತಿ ನೀಡಲಾಗುವುದು. |

**ಸಂಖ್ಯೆ: ಇಡಿ 410 ಯುಎನ್ಇ 2018**

(ಜಿ.ಟಿ. ದೇವೇಗೌಡ)

**ಉನ್ನತ ಶಿಕ್ಷಣ ಸಚಿವರು.**

ಅನುಬಂಧ-೬

## ವಿಶ್ವವಿದ್ಯಾಲಯಗಳಲ್ಲಿ ಮಂಜೂರಾಗಿರುವ/ಭರ್ತಿ ಮಾಡಲಾದ ಹಾಗೂ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆಗಳ ವಿವರ

| ಕ್ರಮ ಸಂಖ್ಯೆ | ವಿಶ್ವವಿದ್ಯಾಲಯ ಹೆಸರು | ಮಂಜೂರಾಗಿರುವ ಹುದ್ದೆಗಳ ವಿವರ | | ಭರ್ತಿ ಮಾಡಲಾದ ಹುದ್ದೆಗಳ ವಿವರ | | ಖಾಲಿ ಇರುವ ಹುದ್ದೆಗಳ ವಿವರ | |
|---|---|---|---|---|---|---|---|
| | | ಬೋಧಕ | ಬೋಧಕೇತರ | ಬೋಧಕ | ಬೋಧಕೇತರ | ಬೋಧಕ | ಬೋಧಕೇತರ |
| 01 | ಮೈಸೂರು ವಿಶ್ವವಿದ್ಯಾಲಯ, ಮೈಸೂರು | 664 | 1361 | 337 | 641 | 327 | 720 |
| 02 | ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ | 164 | 179 | 26 | 33 | 138 | 146 |
| 03 | ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ | 248 | 706 | 73 | 265 | 175 | 441 |
| 04 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು | 137 | 574 | 81 | 215 | 56 | 359 |
| 05 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ | 104 | 137 | 20 | 42 | 84 | 95 |
| 06 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂ | 228 | 425 | 149 | 232 | 79 | 193 |
| 07 | ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು | 15 | 19 | --- | --- | 15 | 19 |
| 08 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು | 71 | 62 | 39 | 37 | 32 | 25 |
| 09 | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ,ಶಿಗ್ಗಾವಿ, ತಾಲ್ಲೂಕು | 21 | 35 | --- | --- | 21 | 35 |
| 10 | ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ | 224 | 590 | 190 | 335 | 34 | 255 |
| 11 | ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು | 275 | 547 | 199 | 302 | 76 | 245 |
| 12 | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | 578 | 1324 | 285 | 465 | 293 | 859 |
| 13 | ಕನ್ನಡ ವಿಶ್ವವಿದ್ಯಾಲಯ, ಹಂಪಿ | 73 | 194 | 60 | 167 | 13 | 27 |
| 14 | ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ | 133 | 168 | 73 | 02 | 60 | 166 |
| 15 | ತುಮಕೂರು ವಿಶ್ವವಿದ್ಯಾಲಯ, ತುಮಕೂರು | 210 | 221 | 132 | 54 | 78 | 167 |
| 16 | ರಾಣಿಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾಂ | 120 | 272 | 90 | 135 | 30 | 137 |
| 17 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. | 635 | 1592 | 290 | 701 | 345 | 891 |
| 18 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ ಬೆಂಗಳೂರು | | | | | | |
| 19 | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಶ್ರೀ ದೇವರಾಜ ಅರಸು ಬಡಾವಣೆ ಕೋಲಾರ | | | | | | |
| | ಒಟ್ಟು | 3900 | 8406 | 2044 | 3626 | 1856 | 4780 |

ಇಡಿ 410 ಯುಡಿಸಿ 2018.